**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು**

**ವಿರಾಜಪೇಟೆ**

**ಓ.ಎಸ್. ಸಂಖ್ಯೆ: 56/2020**

**ಪಿಡಬ್ಲ್ಯೂ- 2**

**ದಿನಾಂಕ : 28-03-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ. ಟಿ ಹೆಚ್ ಎ ವಕೀಲರಿಂದ :-**

1. ದಿನಾಂಕ 07-01-2018 ರಂದು ನನ್ನ ಮಗಳ ಮದುವೆ ಆಗಿರುತ್ತದೆ. ಅದಕ್ಕಿಂತ ಸ್ವಲ್ಪ ದಿನದ ಮುಂಚೆ ಆಕೆಯ ನಿಶ್ಚಿತಾರ್ಥ ಆಗಿರುತ್ತದೆ. ನಿಶ್ಚಿತಾರ್ಥವನ್ನು ನಮ್ಮ ಮಸೀದಿ ಹಾಗೂ ಪ್ರತಿವಾದಿ ಮಸೀದಿಯ ಆಡಳಿತ ಮಂಡಳಿಯವರ ಸಮಕ್ಷಮ ನಡೆದಿರುತ್ತದೆ ಎಂದರೆ ಸರಿ. ಆ ಸಮಯದಲ್ಲಿ ಮೆಹರ್ ಬಗ್ಗೆ ಯಾವುದೇ ತೀರ್ಮಾನವಾಗಿರುವುದಿಲ್ಲ. 280 ಗ್ರಾಂ ಚಿನ್ನವನ್ನು ವಾದಿಗೆ ಮದುವೆ ಸಮಯದಲ್ಲಿ ಒಡವೆಯಾಗಿ ನೀಡಿರುತ್ತೇವೆ. ಅದರಲ್ಲಿ 18 ಪವನ ಬಳೆಗಳು ಆಗಿರುತ್ತವೆ. ಒಟ್ಟು ಮೂರು ಮಾಲೆಗಳನ್ನು ನೀಡಲಾಗಿತ್ತು, ಅದರಲ್ಲಿ ಒಂದು ಹತ್ತುವರೆ ಪವನ, ಇನ್ನೊಂದು ಆರು ಪವನ ಹಾಗೂ ಮತ್ತೊಂದು ಎರಡು ಪವನ ಚಿನ್ನದ ಮಾಲೆಗಳು ಆಗಿರುತ್ತದೆ. ಮೂರು ಪವನ ಸೊಂಟದ ಡಾಬು ವಾದಿಗೆ ನೀಡಲಾಗಿತ್ತು. ಉಂಗುರ ಒಂದುವರೆ ಪವನ ತೂಕದಾಗಿರುತ್ತದೆ. ಕಾಲು ಚೈನ್ ಎರಡು ಪವನ ಆಗಿರುತ್ತದೆ. 10 ಗ್ರಾಂ ಜುಮುಕಿ ಆಗಿರುತ್ತದೆ. ಸಾಕ್ಷಿ ಮುಂದುವರೆದು ಪ್ರತಿವಾದಿಗೆ ಒಂದು ವಾಚ್ ಹಾಗೂ ನಾಲ್ಕು ಗ್ರಾಂ ಉಂಗುರವನ್ನು ನೀಡಿರುತ್ತೇವೆ ಎನ್ನುತ್ತಾರೆ. ಒಟ್ಟು 21 ಪವನ ಚಿನ್ನವನ್ನು ಎಂ ಎಸ್ ಗೋಲ್ ಇರಿಟ್ಟಿಯಲ್ಲಿ ಖರೀದಿ ಮಾಡಲಾಗಿತ್ತು, ಉಳಿದ ಚಿನ್ನವನ್ನು ನನ್ನ ಕುಟುಂಬದವರು ನೀಡಿರುತ್ತಾರೆ. ಈ ಕುರಿತು ರಶೀದಿಯು ನನ್ನ ಬಳಿ ಇರುವುದಿಲ್ಲ,ಅದು ಪ್ರತಿವಾದಿಯ ಮನೆಯಲ್ಲಿ ವಾದಿ ಇಟ್ಟಿದ್ದರು ಎನ್ನುತ್ತಾರೆ. ಈ ಕುರಿತು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

2. ನಾವು ಮಡಿಕೇರಿಯ ಫಯಾಜ್ ವಕೀಲರ ಕಛೇರಿಗೆ ಹೋಗಿದ್ದೆವು ಎಂದರೆ ಸರಿ. ಅಲ್ಲಿ ಒಪ್ಪಂದವಾಗಿ ವಾದಿಯು ಹಾಗೂ ಪ್ರತಿವಾದಿ ತಲಾಕ್ ಗೆ ಒಪ್ಪಿರುತ್ತಾರೆ ಎಂದರೆ ಸರಿಯಲ್ಲ. ನಂತರ ಪ್ರತಿವಾದಿಯು ವಾದಿಗೆ ಎರಡು ಬಾರಿ ಇ ಮೇಲ್ ಮುಖಾಂತರ ತಲಾಕ್ ಸಂದೇಶವನ್ನು ಕಳುಹಿಸಿದ್ದರು ಎಂದರೆ ಸಾಕ್ಷಿಯು ಒಂದು ಬಾರಿ ಆ ರೀತಿ ಸಂದೇಶವನ್ನು ಕಳುಹಿಸಿರುತ್ತಾರೆಂದು ನುಡಿಯುತ್ತಾರೆ. ನಂತರ ಪ್ರತಿವಾದಿ ಇ ಮೇಲ್ ಮುಖಾಂತರ ತಲಾಕ್ ಸಂದೇಶವನ್ನು ಮಸೀದಿಗೆ ಕಳುಹಿಸಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾವು ಯಾವುದೇ ಸಂದೇಶವನ್ನು ತೆಗೆದುಕೊಂಡಿಲ್ಲ ಎನ್ನುತ್ತಾರೆ. ಆ ಸಮಯದಲ್ಲಿ ಪ್ರತಿವಾದಿ ಒಂದು ಬಾರಿ ರೂ. 5,000/- ಹಣವನ್ನು ಇದ್ದತ್ ಗೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಯು ಎರಡನೇ ಬಾರಿ ತಲಾಕ್ ಸಂದೇಶ ನೀಡುವಾಗ ರೂ. 5,000/- ಹಣವನ್ನು ಇದ್ದತ್ ಗೆ ನೀಡಿದ್ದರು ಎಂದರೆ ಸರಿಯಲ್ಲ. ಎರಡು ಸಂದೇಶಗಳ ಮಧ್ಯದಲ್ಲಿ ಒಂದು ತಿಂಗಳ ಅಂತರವಿತ್ತು ಎಂದರೆ ಸರಿ.

3. ಪ್ರತಿವಾದಿ ಮದುವೆಯ ಸಂದರ್ಭದಲ್ಲಿ ವಾದಿಗೆ ಎಂಟು ಪವನ ಚಿನ್ನದ ಮಾಲೆಯನ್ನು ಮೆಹರ್ ರೂಪದಲ್ಲಿ ನೀಡಿರುತ್ತಾರೆ ಎಂದರೆ ಸರಿ. ವಾದಿಗೆ ಸುಹೇಲ್ ಹಾಗೂ ನಾಸೀರ್ ಎಂಬ ವ್ಯಕ್ತಿಗಳ ಜೊತೆ ಸಂಬಂಧ ಇತ್ತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರುಗಳು ಸ್ನೇಹಿತರಾಗಿದ್ದರು ಎನ್ನುತ್ತಾರೆ. ಪ್ರತಿವಾದಿಯ ತಂದೆ, ತಾಯಿ ಹಾಗೂ ಅವರ ಮಾವ ವಾದಿಯನ್ನು ನಮ್ಮ ಮನೆಗೆ ತಂದು ಒಪ್ಪಿಸಿ ಹೋಗಿದ್ದಾರೆ ಎಂದರೆ ಸರಿ. ಆ ಸಮಯದಲ್ಲಿ ಪ್ರತಿವಾದಿಯ ತಂದೆ, ತಾಯಿ ಹಾಗೂ ಮಾವ ವಾದಿಗೆ ಮೇಲೆ ಹೇಳಿದ ಯುವಕರ ಜೊತೆ ಸಂಬಂಧ ಇದೆ ಎಂದು ವಿಚಾರ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ.

4. ನಾನು ಹಾಗೂ ನನ್ನ ಹಿರಿಯ ಮಗಳಾದ ಸಬೀನಾ ಇಬ್ಬರು ಸೇರಿ ಪ್ರತಿವಾದಿಗೆ ನೀನು ವಾದಿಗೆ ತಲಾಕ್ ನೀಡು ಎಂದು ಸಂದೇಶವನ್ನು ಮೊಬೈಲ್ ಮುಖಾಂತರ ಕಳುಹಿಸಿರುತ್ತೇನೆ

ಮತ್ತು ಬೇರೆ ವ್ಯಕ್ತಿಗಳ ಜೊತೆ ಸಂಬಂಧವಿದ್ದ ಬಗ್ಗೆ ಯಾರಿಗೂ ಹೇಳಬೇಡ ಎಂದು ಸಂದೇಶ ಕಳುಹಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ11 ನ್ನು ಹೇಗೆ ಪಡೆದುಕೊಂಡಿರುತ್ತೀರಿ ಎಂಬ ಪ್ರಶ್ನೆಗೆ ಸಾಕ್ಷಿಯು ಅದು ಮೊಬೈಲ್ ಗೆ ಕಳುಹಿಸಿರುತ್ತಾರೆಂದು ನುಡಿಯುತ್ತಾರೆ. ಯಾರ ಕಳುಹಿಸಿರುತ್ತಾರೆಂಬ ಪ್ರಶ್ನೆಗೆ ಸಾಕ್ಷಿಯು ತುಂಬಾ ಜನ ಕಳುಹಿಸಿರುತ್ತಾರೆ ಎನ್ನುತ್ತಾರೆ. ನಿಪಿ11 ರಲ್ಲಿ ಕಾಣುತ್ತಿರುವ ಮಹಿಳೆಯ ಹೆಸರು ನನಗೆ ಗೊತ್ತಿಲ್ಲ. ನಿಪಿ11 ನ್ನು ಸೃಷ್ಟಿ ಮಾಡಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ11ನ್ನು ಶ್ರೀನಿಧಿ ಫೋಟೋ ಅಂಗಡಿಯಿಂದ ಪಡೆದುಕೊಂಡಿರುತ್ತೇನೆ.

5. ಪ್ರತಿವಾದಿ ಇಂಜಿನಿಯರ್ ಕೆಲಸ ಮಾಡುತ್ತಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಪ್ರತಿವಾದಿ ಇಂಜಿನಿಯರ್ ಕೆಲಸ ಮಾಡುತ್ತಾರೆ ಎನ್ನುತ್ತಾರೆ. ನನ್ನ ಪತಿ ಟೀ ಅಂಗಡಿಯನ್ನು ನಡೆಸುತ್ತಾರೆ. ಅದರಿಂದ ಅವರಿಗೆ ತಿಂಗಳಿಗೆ ರೂ.15,000/- ವರಮಾನ ಬರುತ್ತದೆ ಎಂದರೆ ಸರಿ. ನಾವು ಬಾಡಿಗೆ ಮನೆಯಲ್ಲಿ ವಾಸವಿದ್ದೇವೆ ಎಂದರೆ ಸರಿ. ಪ್ರತೀ ತಿಂಗಳು ಬಾಡಿಗೆ ಮನೆಗೆ ರೂ. 15,000/- ಬಾಡಿಗೆಯನ್ನು ನೀಡುತ್ತೇವೆ. 20 ವರ್ಷಗಳಿಂದ ಬಾಡಿಗೆ ಮನೆಯಲ್ಲಿ ವಾಸವಿದ್ದೇವೆ. ಪ್ರತಿವಾದಿಗೆ ಪ್ರತೀ ತಿಂಗಳು ಎರಡುವರೆ ಲಕ್ಷ ಸಂಬಳ ಇದೆ ಎಂದು ಹೇಳಲು ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ಎಲ್ಲ ದಾಖಲೆಯನ್ನು ಪ್ರತಿವಾದಿ ತೆಗೆದುಕೊಂಡು ಹೋಗಿರುತ್ತಾರೆ ಎನ್ನುತ್ತಾರೆ.

6. ನನ್ನ ಪತಿ ಟೀ ಅಂಗಡಿ ನಡೆಸುತ್ತಿದ್ದ ಕಾರಣ ಅವರಿಗೆ ನನ್ನ ಮಗಳ ಮದುವೆಯ ಸಂದರ್ಭದಲ್ಲಿ 35 ಪವನ ಚಿನ್ನವನ್ನು ಕೊಡಲು ಆರ್ಥಿಕವಾಗಿ ಬಲಾಢ್ಯರಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ಪತಿ ಟೀ ಅಂಗಡಿ ಜೊತೆ ಬೇರೆ ವ್ಯಾಪಾರ ಮಾಡುತ್ತಾರೆ ಎನ್ನುತ್ತಾರೆ. ಪ್ರತಿವಾದಿಯಿಂದ ಹಣವನ್ನು ಪಡೆಯಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಷರಿಯತ್ ಪ್ರಕಾರ ವಾದಿ ಹಾಗೂ ಪ್ರತಿವಾದಿಯ ಮಧ್ಯೆ 2020 ರಲ್ಲಿ ತಲಾಕ್ ಆಗಿರುತ್ತದೆ ಎಂದರೆ ಸರಿಯಲ್ಲ. ಆದ ಕಾರಣ ವಾದಿಯು ಈ

ದಾವೆಯಲ್ಲಿ ಕೇಳಿರುವ ಪರಿಹಾರಕ್ಕೆ ಬದ್ಧಳಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ನಿಪಿ14 ನ್ನು ತೋರಿಸಿ ಅದು ವಕೀಲರ ಕಛೇರಿಯಲ್ಲಿ ತಯಾರು ಮಾಡಿದ ದಾಖಲೆಯೇ ಎಂದು ಕೇಳಿದಾಗ ಸಾಕ್ಷಿಯು ಅದನ್ನು ಶ್ರೀನಿಧಿ ಫೋಟೋ ಅಂಗಡಿಗೆ ಹೋಗಿ ಅಲ್ಲಿಂದ ವಕೀಲರ ಕಛೇರಿಯಲ್ಲಿ ಬಂದು ಮಾಡಿರುತ್ತೇವೆ ಎನ್ನುತ್ತಾರೆ. ನಾನು ಸಾಕ್ಷ್ಯಪ್ರಮಾಣದಲ್ಲಿ ಬರೆದಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ.

ಪಾಟೀ ಸವಾಲು : ಮುಕ್ತಾಯ.

ಮರು ವಿಚಾರಣೆ : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ. ಹೇ. ಕೇ. ಸ. ಇದೆ.

ಸಹಿ/–

(ಪ್ರದೀಪ ಪೋತದಾರ)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ವಿರಾಜಪೇಟೆ.